**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 1

**CW**. 1

**ಸಾಕ್ಷಿಯ ಹೆಸರು –ಪುಟ್ಟರಾಜೇಗೌಡ**

**ತಂದೆಯ ಹೆಸರು ಕರಿಗೌಡ**

**ವಯಸ್ಸು –70 ವರ್ಷಗಳು** ದಿನಾಂಕ 02–07–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಹೊಸ ಅಗ್ರಹಾರ, ಕೆ ಆರ್ ನಗರ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–2 ನನ್ನ ಹೆಂಡತಿ . ಮೃತ ಗೋಪಿಕೃಷ್ಣ ನನ್ನ ಮಗ . ನನ್ನ ಮಗ ಜೀವಂತ ಕಾಲದಲ್ಲಿ ರೈಲ್ವೆ ಪೊಲೀಸ್ ಆಗಿ ಕೆಲಸ ಮಾಡುತ್ತಿದ್ದ . ನನ್ನ ಮಗ ಮರಣ ಹೊಂದುವ ಕಾಲಕ್ಕೆ 9 ವರ್ಷ ಸೇವೆ ಮಾಡಿದ್ದನು. 1 ನೇ ಆರೋಪಿ ನನ್ನ ಸೊಸೆ. 2 ಮತ್ತು 3 ನೇ ಆರೋಪಿತರ ತಂದೆ ತಾಯಿ. 4 ನೇ ಆರೋಪಿ 1 ನೇ ಆರೋಪಿಯ ದೊಡ್ಡಮ್ಮ. ನನ್ನ ಮಗ ಮದುವೆ ಸಮಯದಲ್ಲಿ ಬೆಂಗಳೂರಿನಲ್ಲಿ ರೈಲ್ವೆ ಪೊಲೀಸ್ ಆಗಿ ಕೆಲಸ ಮಾಡುತ್ತಿದ್ದ. ನನ್ನ ಮಗನ ಮತ್ತು 1 ನೇ ಆರೋಪಿಯ ಮದುವೆಯು ನನ್ನ ಮಗ ಮರಣ ಹೊಂದುವ 9 ತಿಂಗಳ ಹಿಂದೆ ಆಗಿರುತ್ತದೆ. ನನ್ನ ಮಗ ಮತ್ತು 1 ನೇ ಆರೋಪಿಯ ಮದುವೆಯಾದ ನಂತರ 1–2 ಸಲ ನಮ್ಮ ಮನೆಯಲ್ಲಿ ಇದ್ದಳು ನಂತರ 1 ನೇ ಆರೋಪಿಯು ತನ್ನ ತವರು ಮನೆಯಲ್ಲಿ ವಾಸ ಮಾಡುತ್ತಿದ್ದಳು. 1 ನೇ ಆರೋಪಿಯು ನನ್ನ ಮಗನ ಜೊತೆ ವಾಸ ಮಾಡುಲು ಆತ ಕೆಲಸ ಮಾಡುತ್ತಿದ್ದ ಬೆಂಗಳೂರಿಗೆ ಹೋಗದಿದ್ದ ಕಾರಣ ನನ್ನ ಮಗ ಮಂಡ್ಯಗೆ ವರ್ಗಾವಣೆ ಮಾಡಿಸಿಕೊಂಡು, ಮಂಡ್ಯದಲ್ಲಿ ಮನೆ ಮಾಡಿ 1 ನೇ ಆರೋಪಿ ನನ್ನ

ಮಗನ ಜೊತೆ ವಾಸ ಮಾಡುತ್ತಿದ್ದಳು. ನನ್ನ ಮಗ ಗೋಪಿಕೃಷ್ಣ ಆಗಾಗ್ಗೆ ನಮ್ಮ ಮನೆಗೆ ಬರುತ್ತಿದ್ದು , ನಮ್ಮ ಯೋಗಕ್ಷೇಮ ವಿಚಾರಿಸುತ್ತಿದ್ದ. ಆದರೆ 1 ನೇ ಆರೋಪಿಯು ನಮ್ಮ ಮನೆಗೆ ಬರುತ್ತಿರಲಿಲ್ಲ. ನನ್ನ ಮಗ ನಮ್ಮ ಮನೆಗೆ ಬಂದಾಗ , ನಾನು ಮಂಡ್ಯದಲ್ಲಿ ಮನೆ ಮಾಡಿದರು ಕೂಡ ತನ್ನ ಹೆಂಡತಿ ನನ್ನ ಜೊತೆ ವಾಸ ಮಾಡಲು ಬರುವುದಿಲ್ಲ ಎಂದು ಹೇಳುತ್ತಿದ್ದ. ನನ್ನ ಮಗ ಮರಣ ಹೊಂದುವ ಹಿಂದಿನ ದಿನ 3 ನೇ ಆರೋಪಿ ನನ್ನ ಮಗನಿಗೆ ಫೋನ್ ಮಾಡಿ , ಹಬ್ಬಕ್ಕಾಗಿ ತಮ್ಮ ಮನೆಗೆ ಬರಲು ಹೇಳಿದ್ದನು. ನನ್ನ ಮಗ ಕೆಲಸಕ್ಕೆ ಹೋದ ನಂತರ 1 ನೇ ಆರೋಪಿಯು ನನ್ನ ಮಗನಿಗೆ ವಿಚಾರ ತಿಳಿಸಿದೆ ತನ್ನ ತವರು ಮನೆಗೆ ಹೋಗಿದ್ದಳು. ನನ್ನ ಮಗ ಕೆಲಸದಿಂದ ಮನೆಗೆ ಬಂದು ಹೆಂಡತಿಯ ಬಗ್ಗೆ ಅಕ್ಕಪಕ್ಕದವರನ್ನು ವಿಚಾರಿಸಿದಾಗ , ಆಕೆ ತವರು ಮನೆಗೆ ಹೋಗಿದ ಬಗ್ಗೆ ಗೊತ್ತಾಯಿತು. ಆನಂತರ ನನ್ನ ಮಗ ಕೂಡ 1 ನೇ ಆರೋಪಿಯ ತವರು ಮನೆಗೆ ಹೋಗಿದ್ದ. ಆ ದಿನ ಸಂಜೆ 7.00 ಗಂಟೆಗೆ ನನ್ನ ಮಗ ಚಾಸಾ–5 ರವರಿಗೆ ದೂರವಾಣಿಕರೆ ಮಾಡಿ, ನನ್ನ ಹೆಂಡತಿ ಮತ್ತು ಅವರ ಕಡೆಯವರು ನನಗೆ ಕಿರುಕುಳ ನೀಡುತ್ತಿದ್ದಾರೆ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಹೇಳಿದ್ದ ಎಂದು ಗೊತ್ತಾಯಿತು. ಸದರಿ ವಿಚಾರವಾನ್ನು ಚಾಸಾ–5 ರವರ ತಾಯಿ ತಿಳಿಸಿದಳು. ನಂತರ ನಾನು ಮತ್ತು ಇತರೆಯರು ನನ್ನ ಮಗನನ್ನು ಹುಡುಕಿಕೊಂಡು ನನ್ನ ಸೋದರ ಜಮೀನಿನ ಬಳಿ ಹೋಗಿ ನೋಡಲಾಗಿ , ಅಲ್ಲಿ ಅವನಿಗೆ ಸೇರಿದ ಒಂದು ಮೋಟರ್ ಸೈಕಲ್ ಇದ್ದು, ಸ್ವಲ್ಪ ದೂರದಲ್ಲಿ ನನ್ನ ಮಗ ಮರಕ್ಕೆ ನೇಣು ಹಾಕಿಕೊಂಡು , ಕೆಳಗೆ ಬಿದ್ದು ಮೃತಪಟ್ಟಿದ್ದನು. ನಾವು ಅಲ್ಲಿ ಹೋಗಿ ನೋಡಿ ನಂತರ ಪೊಲೀಸರಿಗೆ ದೂರು ನೀಡಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ನನ್ನ ಮಗ ನಮ್ಮ ಮನೆಗೆ ಬಂದಾಗ ನನ್ನ ಹೆಂಡತಿ ಸರಿ ಇಲ್ಲ , ನಾನು ಕೆಲಸಕ್ಕೆ ಹೋದ ನಂತರ ಬೇರೆ ಬೇರೆ ಕಡೆ ತಿರುಗಾಡಲು ಹೋಗುತ್ತಾಳೆಂದು ಹೇಳಿದ್ದ. ನನ್ನ ಮಗ ಮೃತಪಟ್ಟ ನಂತರ ಆತನ

ಜೇಬಿನಲ್ಲಿದ್ದ ಆತನ ಫೋನ್ ಅನ್ನು ಪೊಲೀಸರ ವಶಕ್ಕೆ ನೀಡಿದ್ದೇನೆ. ನೀಡಿದ ದಿನಾಂಕ ನನಗೆ ನೆನಪಿಲ್ಲ. ಸದರಿ ಫೋನ್ ಅನ್ನು ಜಪ್ತಿ ಮಾಡಿ , ಪೊಲೀಸರು ಒಂದು ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಫೋನ್ ನಲ್ಲಿದ್ದ ಅಂಶಗಳನ್ನು ಪೊಲೀಸರು ತೆಗೆದು ನೋಡಿದಾಗ, 1 ನೇ ಆರೋಪಿಯು ನನ್ನ ಮನನಿಗೆ ಬೆದರಿಸಿ, ನಾನು ನಿಮ್ಮ ಕುಟುಂಬದವರ ಮೇಲೆ ದೂರು ನೀಡಿ ಜೈಲಿಗೆ ಕಳುಹಿಸುತ್ತೇನೆಂದು ಮಾತನಾಡಿಕೊಂಡಿರುವ ವಿಚಾರ ಗೊತ್ತಾಯಿತು. ಸದರಿ ಫೋನ್ ಅನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ- ಆರೋಪಿತರ ಪರ ಶ್ರೀ ಎಂ ಬಿ ವಕೀಲರಿಂದಃ-</u>**

ಚಾಸಾ-2 ನನ್ನ ಹೆಂಡತಿ . ಚಾಸಾ-3 ರಿಂದ 5 ನಮ್ಮ ಗ್ರಾಮದವರು ಎಂದರೆ ಸರಿ . ಚಾಸಾ-15 ಮತ್ತು 16 ನನ್ನ ಹೆಣ್ಣು ಮಕ್ಕಳು. ಚಾಸಾ-20 ಮತ್ತು 21 ರವರು ನನ್ನ ಅಳಿಯಂದಿರು. ಚಾಸಾ-3 ಮತ್ತು 4 ರವರ ಮನೆ ನಮ್ಮ ಮನೆಯಿಂದ ಒಂದು ಫರ್ಲಾಂಗ ದೂರದಲ್ಲಿದೆ. ನನ್ನ ಮಗನ ಶವ ನೋಡಿದ ನಂತರ ಆತನ ಶವ ಸಂಸ್ಕಾರ ಮಾಡುವವರೆಗೆ ನಾನು ಶವದ ಬಳಿ ಇದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಮಧ್ಯೆ ನಾನು ದೂರು ನೀಡಲು ಹೋಗಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮಗನಿಗೆ ಸಾಮಾನ್ಯವಾಗಿ ತಿಳುವಳಿಕೆ ಇತ್ತು ಎಂದರೆ ಸರಿ . ಆರೋಪಿತರು ಕಿರುಕುಳ ನೀಡಿದ ಬಗ್ಗೆ ನನ್ನ ಮಗ ದೂರು ನೀಡಿಲ್ಲ ಎಂದರೆ ಸರಿ .

**(ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ.400/- ವೆಚ್ಚದೊಂದಿಗೆ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.)**

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.